# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಮನೋಹರ ಆಚಾರ್ಯ



## ಬಾ-ಹರಿಲಾಲ ಭೇಟಿ

ಬಾ ಅವರ ಅನಾರೋಗ್ಯದ ಬಗ್ಗೆ ವಿಷಯ ತಿಳಿಯುತ್ತಲೇ ಹರಿಲಾಲ ಪೂನಾಕ್ಕೆ ಬಂದ. ಜೈಲು ಅಧಿಕಾರಿಗಳನ್ನು ಭೇಟಿಯಾಗಿ ಬಾ ಅವರನ್ನು ಸಂದಿಸಲು ಅನುಮತಿಯನ್ನೂ ಪಡೆದ. ಅಂದು ಆಗಾ ಖಾಂ ಮಹಲ್‌ನಲ್ಲಿ ಬಾ ಅವರ ನಿವಾಸಕ್ಕೆ ಬಂದು, ಬಾ ಅವರ ಸಮೀಪಕ್ಕೆ ಹೋದ.

ಬಾ ಅವರು ಈಗ ಹೆಚ್ಚು ಓಡಾಡಲು ಸಾಧ್ಯವಿರಲಿಲ್ಲ. ಹರಿಲಾಲನನ್ನು ನೋಡುತ್ತಲೇ ಅವರು ರೋದಿಸಿದರು. ಹರಿಲಾಲ ತಾಯಿಯ ಕಾಲುಗಳಿಗೆ ನಮಸ್ಕರಿಸಿದ. ತಾಯಿ, ಮಗನ ಎಣ್ಣೆ ಕಾಣದ ತಲೆಗೂದಲುಗಳಲ್ಲಿ ಬೆರಳಾಡಿಸುತ್ತಾ ತಮ್ಮ ಕಣ್ಣೀರಿನಿಂದ ಅದನ್ನು ತೊಳೆದರು.

ಬಂದೆಯಾ ಹರಿ,' ಬಾ ಅವರು ತಮ್ಮ ಕ್ಷೀಣ ಸ್ವರದಲ್ಲಿ ಹೇಳಿದರು, 'ನನ್ನ ಬಗ್ಗೆ ಚಿಂತಿಸಬೇಡ, ಹರಿ. ನಿನ್ನ ಪರಿಸ್ಥಿತಿ ಸಹ ಎಲ್ಲಿ ಸರಿಯಿದೆ?' ಹರಿಲಾಲ ಮಾತನಾಡದಾದ.

* * *

ಬಾ ಅವರ ಹಾಸಿಗೆಯ ಬಳಿ ನೆಲದ ಮೇಲೆ ಕಾಲುಗಳನ್ನು ಮಡಿಚಿ ಕೂತ ಬಾಪೂ ತಾಯಿಮಗನ ಅಪೂರ್ವ ಮಿಲನವನ್ನು ನೋಡುತ್ತಿದ್ದರು. ಅವರ ದೃಷ್ಟಿ ಸಹ ಮಗನ ಶರೀರಿದ ಮೇಲೆ ನೆಟ್ಟಿತ್ತು.

'ಈಗ...ಈಗ...ನೀನೆಲ್ಲೂ ಹೋಗಬಾರದು, ಹರಿ,' ಬಾ ಒತ್ತಿ ಬಂದ ಕಂಠದಿಂದ ಹೇಳಿದರು, 'ಇಲ್ಲಿಯೇ ಇರು, ದೇವದಾಸ ಮತ್ತು ರಾಮದಾಸರು ಬರುತ್ತಿರುತ್ತಾರೆ. ನೀನು ಸಹ ಬರುತ್ತಿರು. ನೀನು ಬಂದಿದ್ದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು ಹರಿ.'

'ಅಮ್ಮಾ, ಸರ್ಕಾರ ನಿನ್ನನ್ನು ಭೇಟಿಯಾಗಲು ಇಂದು ಮಾತ್ರ ಅನುಮತಿಯನ್ನು ಕೊಟ್ಟಿದೆ.'

'ಇದೇನು?' ಬಾ ಅವರ ಸೊರಗಿದ ದೇಹದಲ್ಲಿ ಜೀವ ಬಂದಂತಾಯಿತು, 'ದೇವದಾಸನಿಗೆ ಸರ್ಕಾರ ನಿತ್ಯ ಬರಲು ಬಿಡುತ್ತದೆ, ನಿನಗೆ ಒಂದು ದಿನಕ್ಕೆ ಮಾತ್ರ ಅನುಮತಿಯನ್ನು ಕೊಟ್ಟಿದೆಯೇ? ಜೈಲಿನ ಉನ್ನತ ಅಧಿಕಾರಿಗಳನ್ನು ನನ್ನ ಬಳಿಗೆ ಕರೆದುಕೊಂಡು ಬಾ. ನಾನು ಅವರಿಗೆ ಹೇಳುತ್ತೇನೆ.'

'ಹರಿಲಾಲನನ್ನೂ ದೇವದಾಸನಂತೆ ನಿತ್ಯ ಬರಲು ಬಿಡಿ ಎಂದು ಇಂದೇ ನಾನು ಹೇಳುತ್ತೇನೆ.' ಬಾಪೂ ಈ ನಡುವೆ ಹೇಳಿದರು.

'ಹರಿಲಾಲ ಬಡವ, ಅಸಹಾಯಕ. ಅದಕ್ಕೇ ಈ ಭೇದಭಾವನೆಯನ್ನು ಮಾಡುತ್ತಾರೆ.' ಬಾ ಅವರಿಗೆ ಅಳು ಬಂತು, 'ಈ ಬಡಪಾಯಿ, ತನ್ನ ತಾಯಿಯನ್ನೂ ಭೇಟಿಯಾಗಲು ಸಾಧ್ಯವಿಲ್ಲವೇ? ಎಲ್ಲರೂ...ಎಲ್ಲರೂ... ಇವನೊಂದಿಗೆ ಯಾಕೆ ಹೀಗೆ ವರ್ತಿಸುತ್ತಾರೆ?' ಬಾ ಅವರು ಮುಂದಕ್ಕೆ ಮಾತನಾಡದಾದರು. ಬಾಪೂ ನೆಲವನ್ನೇ ನೋಡುತ್ತಿದ್ದರು.

* * *

ಭೇಟಿಯ ಸಮಯ ಮುಗಿದ ನಂತರ ಬಾ ಅವರ ವೈದ್ಯರು ಈ ವಿಷಯವನ್ನು ಜೈಲಿನ ಅಧಿಕಾರಿಗಳ ಗಮನಕ್ಕೆ ತಂದು, ಈ ಬಗ್ಗೆ ಶಿಫಾರಸು ಮಾಡಿದರು. ಬಾ ಅವರ ಆರೋಗ್ಯದ ಬಗ್ಗೆ ತಿಳಿಯಲು ಹರಿಲಾಲನಿಗೆ ಅನುಮತಿ ನೀಡುವಂತೆ ಬಾಪೂ ಸಹ